SRI C. M. ARUMUGHAM.—May I know when this Governing Council was constituted and the reason for the resignation of the former Principal ? Why did the agitation take place ? How many times the present Governing Council has met for the last one year ? When does the Government contemplate to appoint a permanent Principal for this First Grade College ?

SRI A. R BADARINARAYANA.—Regarding the details asked for by the hon Member, I am sorry I have not got them here. I think I had given enough details in the matter and I did not anticipate these particular details. I have no objection to give you that information if you want it, later on. Regarding the appointment of the Principal, we are going to appoint him within a short time.

Supply of Wheat Products to Fair Price Depots

ಶ್ರೀ ಕೆ ಎಂ. ನಾಗಣ್ಣ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ಆಹಾರ ಸಚಿವರು ಈ ತಿಂಗಳು ೧೫ನೇ ತಾರೀಖಿಗೆ ರೇಷ, ಮೈದ ಡಿಪೋಗಳಲ್ಲಿ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು ೨೮ನೆ ತಾರೀಖು ಆದರೂ ಇನ್ನೂ ಬಂದಿಲ್ಲ ಬ್ಲಾಕ್ ಮಾರ್ಕೆಟ್ ನಲ್ಲಿ ಮೂರು ರೂಪಾಯಿ ೨೫ ಪೈಸೆ ಕೊಟ್ಟು ಒಂದು ಕೆ. ಜಿ. ರೇಷ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಅವರು ಹೇಳಿದ ಹಾಗೆ ಜಯಮಾಡಿ ನಡೆದು ಕೂಂಡರೆ ಸಾಕು ಎಂದು ನಾನು ಹೇಳುತ್ತೇನೆ. ನಾವು ಊರಿನಲ್ಲಿ ತಿರುಗಾಡುವ ಹಾಗೆ ಇಲ್ಲ. ಜನ ಬಹಳ ಕಷ್ಟಪಡುತ್ತಿದ್ದಾರೆ ಇದಲ್ಲದೆ ಸೀಮೆ ಎಣ್ಣೆ ಕಷ್ಟ ಹೇಳತೀರದು. ಸಾಕಷ್ಟು ಎಣ್ಣೆ ಬರುತ್ತಿಲ್ಲ. ಆಹಾರ ಸಚಿವೆಯರು ಇದಕ್ಕೆಲ್ಲ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Deisel and Kerosone Supply

ಶ್ರೀ ಟಿ. ಎಂ. ಮಂಜುನಾಥ (ತಿಪಟೂರು).—ಮಾನ್ಯ ಸಚಿವರು ಹೇಳಿದರು ೭ ಸಾವಿರ ಲೀಟರ್ ಡೀಸೆಲ್ ಮತ್ತು ಸೀಮೆ ಎಣ್ಣೆ ಕೊಟ್ಟಿದ್ದೇವೆ ಎಂದು ಸೀಮೆ ಎಣ್ಣೆ ಒಂದು ಲೀಟರಿಗೆ ಮೂರು ರೂಪಾಯಿ ಪ್ರಕಾರ ಮಾರಾಟವಾಗುತ್ತಿದೆ. ಸಚಿವೆಯರು ಇಲ್ಲಿ ಹೇಳುವುದನ್ನು ಕೇಳಿಕೊಂಡು ಊರಿಂಗಳಿಗೆ ಹೋದರೆ ಅಲ್ಲಿ ಏನೂ ಬಂದಿರುವುದೇ ಇಲ್ಲ. ಆದ್ದರಿಂದ ಸ್ಪಷ್ಟವಾದ ಪರಿಸ್ಥಿತಿಯನ್ನು ಅವಿತುಂಕೊಂಡು ಹೇಳಿಕೆ ಕೂಡಲಿ ಎಂದು ಹೇಳುತ್ತೇನೆ

Taking up a notice under Rule 146

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಪೊನ್ನೆ ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆಯ ಮೇಲೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ಮಂತ್ರಿ ಮಂಡಲದ ವಿರುದ್ಧ ಸದಸ್ಯರಾಗಿರತಕ್ಕ ಮಾನ್ಯ ಚನ್ನಬಸಪ್ಪನವರು ಮತ್ತು ಸಿದ್ದವೀರಪ್ಪನವರು ನಿಯಮಾವಳಿಯ ಪ್ರಕಾರ ಕಾರ್ಯಕಲಾಪ ನಡೆಯಬೇಕೆಂದು ಹೇಳಿ ಆ ಹೊತ್ತು ಆಕ್ಷೇಪಣೆ ಎತ್ತಿದರು. ಅದರ ಪರಿಣಾಮವಾಗಿ ನಿಲುವಳಿ ವಿಧಿಯ ಪ್ರಕಾರ ತಮಗೆ ಒಂದು ನೋಟೀಸ್ ಕಳುಹಿಸಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿಕೊಂಡಿದ್ದೇವೆ.

ಅಧ್ಯಕ್ಷರು —ನಿಮ್ಮ ನೋಟೀಸು ಬಂದಿದೆ. ರೂಲ್ ೧೫೦ರ ಪ್ರಕಾರ ಲೀಡರನ್ನು ಕೇಳಿ ಟೈಮ್ ಫಿಕ್ಸ್ ಮಾಡಬೇಕಾಗಿ ಬರುತ್ತದೆ. ಅವರನ್ನು ಕನ್‌ಸಲ್ಟ್ ಮಾಡಿ ತಮಗೆ ತಿಳಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ—ಅದಕ್ಕೆ ಸಪರೇಟ್ ಡೇ ಫಿಕ್ಸ್ ಮಾಡುವ ಹಾಗಿದ್ದರೆ, ನಮಗೆ ಏನು ಅಭ್ಯಂತರವಿಲ್ಲ

ಶ್ರೀ ಕಾಗೋಡು ತಿಮ್ಮಪ್ಪ.—ಅದರ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ಕಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಇದು ಬಹಳ ಪ್ರಾಮುಖ್ಯವಾದ ವಿಷಯ ಆಗಿರುವುದರಿಂದ ತಾವು ಆದಷ್ಟುಬೇಗ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ತಮ್ಮ ಕಳಕಳಿಯನ್ನು ತಿಳಿಸುತ್ತೇನೆ.

Long sittings during the sessions

ಶ್ರೀ ಎಚ್ ಡಿ ದೇವೇಗೌಡ.—ಮೊನ್ನೆ ನಾನು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಪ್ರಸ್ತಾಪ ಮಾಡಿದ ರೀತಿ ಈಪೊತ್ತು ಲ್ಯಾಂಡ್ ರಿಫಾರ್ಮಿಂಸ್ ಬಿಲ್ ತೆಗೆದುಕೊಳ್ಳಬೇಕಾಗಿತ್ತು. ಈ ಸಭೆ ಫೆಬ್ರುವರಿ ೧೫ನೇ ತಾರೀಖು ಪ್ರಾರಂಭವಾಯಿತು. ಬಹುಶಃ ಮೈಸೂರು ರಾಜ್ಯ ಅಸೆಂಬ್ಲಿಯ ಇತಿಹಾಸದಲ್ಲಿ ಇಷ್ಟು ದಿನ ಈ ಸಭೆ ಎಂದೆಂದೂ ನಡೆದಿರಲಿಲ್ಲ. ಈಪೊತ್ತು ಸಭೆಯನ್ನು ಅಡ್ಜರ್ನ್ ಮಾಡಬೇಕೆಂದು ಒತ್ತಾಯ ಮಾಡಿದರೆ ಲ್ಯಾಂಡ್ ರಿಫಾರ್ಮಿಂಸ್ ಬಿಲ್ಲನ್ನು ಅಪೊಜಿಷನ್ ಪಾರ್ಟಿಯವರು ಕಾಂಗ್ರೆಸ್ (ಒ)ನವರು ಪಾಸ್ ಮಾಡಿಲಿಕ್ಕೆ ಅಡ್ಡಿ ಪಡಿಸಿದರು ಎಂದು ದೇಶದಲ್ಲಿ ಪ್ರಚಾರ ಮಾಡುತ್ತೀರಿ. ಆದಕೋಸ್ಕರ ತಡೆದು ತಡೆದು ನೀವು ಹೇಳಿದ ಹಾಗೆ ಕೇಳಿಕೊಂಡು ಬಂದಿದ್ದೇವೆ. ಇನ್ನು ಮುಂದೆ ಇದೇ ರೀತಿ ಮುಂದುವರಿಯುವುದಕ್ಕೆ ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ ಇದಕ್ಕೆ ಒಂದು ಇತಿಮಿತಿ ಇದೆ. ಶಾಸನ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ನಿಯಮಗಳಿವೆ ನಮ್ಮ ಪಕ್ಷದಲ್ಲಿಯೇ ಗುದ್ದಾಟವಾಗಿ ಈ ವಿಧಾನಸಭೆಯ ಮೇಲೆ ಅಂತಿಮ ನಿರ್ಣಯಕ್ಕೆ ಬಾರದೆ ಎಷ್ಟು ದಿವಸ ತಳ್ಳಿಕೊಂಡು ಹೋಗಬಹುದು ? ನಿಮ್ಮ ತೊಂದರೆಗಳಿಗೋಸ್ಕರ ಈ ಬಿಲ್ಲಿನ ಚರ್ಚೆಯನ್ನು ಮುಂದೂಡಿಸಲ್ಪಟ್ಟಿದೆ. ಕಳೆದ ವಾರ ತೆಗೆದುಕೊಳ್ಳೋಣ ಎಂದು ತೀರ್ಮಾನ ಕೊಟ್ಟಿರಿ. ಆನಂತರ, ಸೋಮವಾರ ತೆಗೆದುಕೊಳ್ಳಬಹುದೆಂದು ಹೇಳಿದಿರಿ. ಇವತ್ತೂ ನೋಡಿದರೆ ಅಜಂಡದಲ್ಲಿ ಇಲ್ಲದೇ ಇರುವ ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ಲನ್ನು ತೆಗೆದುಕೊಂಡು ಪ್ರಸ್ತಾಪ ಮಾಡುವ ಸನ್ನಿವೇಶದಲ್ಲಿ ಇದ್ದೀರಿ

ಸನ್ಮಾನ್ಯ ಸಭಾ ಅಧ್ಯಕ್ಷರೇ ನಮ್ಮನ್ನು ಈ ಇಕ್ಕಟ್ಟಿನಿಂದ ಪಾರು ಮಾಡಿ ಯಾವಾಗ ಊರಿಗೆ ಕಳುಹಿಸಿಕೊಡುತ್ತೀರಿ? ಎಂದು ಹೇಳಬೇಕು ಲ್ಯಾಂಡ್ ರಿಫಾರ್ಮಿಂಸ್ ಬಿಲ್ ಪಾಸು ಮಾಡುವುದು ಬಿಡುವುದು ಮುಖ್ಯವಲ್ಲ ಇವತ್ತು ಸರ್ಕಾರ ಉದರಲ್ಲಿ ಎಷ್ಟು ತೀವ್ರತೆಯನ್ನು ಇಟ್ಟುಕೊಂಡಿದ್ದಾರೆಂಬುದು ಗೊತ್ತಾಗುತ್ತದೆ ಈ ಬಿಲ್ ಪಾಸ್ ಆಗದೆ ಹೋದರೆ ಅದರ ಹೊಣೆಗಾರಿಕೆ ಸರ್ಕಾರದ ಮೇಲೆ ಬರುತ್ತದೆ. ೩೦ನೇ ತಾರೀಖಿನಿಂದ ಆಜೆಗೆ ನಾವು ಈ ಸಭೆಯಲ್ಲಿ ಕೆಲಸ ಮಾಡುವುದಕ್ಕೆ ತಯಾರು ಇಲ್ಲ. ಇದಕ್ಕಾಗಿ ನನ್ನ ಮೇಲೆ ಆಗಲೀ ನನ್ನ ಮಿತ್ರರ ಮೇಲೆ ಆಗಲೀ, ಯಾವುದೇ ತೆರನಾದ ಆರೋಪಣೆಯನ್ನು ಹೊರಿಸ ತಕ್ಕದ್ದು ಸಾಧುವಾದದ್ದು ಅಲ್ಲ ಎಂದು ಸಭಾಧ್ಯಕ್ಷರಿಯವರಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು) —ಮಾನ್ಯ ಅಧ್ಯಕ್ಷರಿಗೆ ಗೊತ್ತಿರುವ ಹಾಗೆ ೩ ಬಿಲ್ಲುಗಳನ್ನು ನಾವು ಪಾಸ್ ಮಾಡಲಿಕ್ಕೆ ಬೇಕು. ಲ್ಯಾಂಡ್ ರಿಫಾರ್ಮಿಂಸ್ ಬಿಲ್ಲು, ಸಿವಿಲ್ ಸರ್ವಿಸಸ್‌ಗೆ ಸಂಬಂಧಪಟ್ಟಿದು ಇನ್ನೊಂದು ಇವೆರಡನ್ನೂ ಪಾಸ್ ಮಾಡಬೇಕು. ಅದರ ಜೊತೆಗೆ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಇನ್ನೊಂದು ಬಿಲ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಬೇಕು. ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಆಗಿದ್ದಂಥ ತೀರ್ಮಾನ ಮಾನ್ಯ ಎದುರು ಪಕ್ಷದ ನಾಯಕರಿಗೆ ಸ್ಪಷ್ಟವಾಗಿ ವಿವಿಧವಾಗಿದೆ. ಆ ತೀರ್ಮಾನಕ್ಕೆ ಅವರು ಕೂಡ ಬದ್ಧರಾಗಿದ್ದಾರೆ ಆ ಗೊತ್ತು ಮಾಡಿದ ಕಾಲಕ್ಕೆ ವಿರೋಧ ಪೆಚ್ಚು ಚರ್ಚೆಯಾಗಿದೆ. ಇಷ್ಟೇ ಸೊನ್ನೆ ಇದು ಪಾಸು ಆಗಲೇ ಬೇಕೆಂದು ತೀರ್ಮಾನವಾಗಿದೆ. ಈಗ ಒಂದು ಬಿಲ್ ಪಾಸ್ ಆಗಿದೆ ಅಗ್ರಿಕಲ್ಚರಲ್ ಯೂನಿವರ್ಸಿಟಿಗೆ ಸಂಬಂಧಪಟ್ಟ ಬಿಲ್ಲಿಗೆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಪ್ಪಿಕೊಂಡಿರುವ ಪ್ರಕಾರ ಎರಡೂವರೆ ಗಂಟೆ ಚರ್ಚೆ ಮಾಡಿ ಸೆಲೆಕ್ಟ್ ಕಮಿಟಿ ರೆಫರ್ ಮಾಡೋಣ ಎಂದು ತೀರ್ಮಾನವಾಗಿತ್ತು. ಆ ಬಿಲ್ಲಿನ ಮೇಲೆ ಪೆಚ್ಚು ಚರ್ಚೆ ನಡೆಯುತ್ತಾ ಇರುವಾಗ ಅದರ ಜವಾಬ್ದಾರಿ ನಮ್ಮ ಮೇಲೆ ಬಾಕಿ ಅವರು ಕಳುಹಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ ನಮ್ಮ ತೀರ್ಮಾನದ ಹಿಂದೆ ಹೋಗಿಲ್ಲ. ಲ್ಯಾಂಡ್ ರಿಫಾರ್ಮಿಂಸ್ ಬಿಲ್ಲನ್ನು ಕೂಡ ಈ ವಾರದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಬಿ. ಪಿ. ಕಕ್ಕಿಲಾಯ —ಈಗಲೇ ತೆಗೆದುಕೊಳ್ಳುವುದಕ್ಕೆ ತಯಾರು ಇದ್ದೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಗ್ರಿಕಲ್ಚರಲ್ ಯೂನಿವರ್ಸಿಟಿ ಬಿಲ್ಲು ಮತ್ತು ಇನ್ನೊಂದು ಯೂನಿವರ್ಸಿಟಿ ಬಿಲ್ಲನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿದ ತಕ್ಷಣ ಲ್ಯಾಂಡ್ ರಿಫಾರ್ಮ್ಸ್ ಬಿಲ್ಲನ್ನು ಕ್ಲಾಜ್ ಬೈ ಕ್ಲಾಜ್ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ನನ್ನ ಪಕ್ಷದಲ್ಲಿ ಈ ಬಿಲ್ಲಿನ ಬಗ್ಗೆ ತೀರ್ಮಾನ ಮಾಡುವುದಕ್ಕೆ ಸಾಧ್ಯ ಇಲ್ಲದೇ ಇರುವ ಹಾಗೆ ಅಡ್ಡಿ ಮಾಡುತ್ತಿದ್ದಾರೆಂದು ಎದುರು ಪಕ್ಷದ ನಾಯಕರು ನೇರವಾಗಿ ಅಪಾದನೆ ಮಾಡಿದ್ದಾರೆ. ಆ ಬಿಲ್ಲನ್ನು ಈಗಲೇ ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆಂದು ಮಾತ್ರ ಈ ಸಭೆಗೆ ತಿಳಿಸುತ್ತೇನೆ.

ಶ್ರೀ ಬಿ ವಿ. ಕಕ್ಕಿಲಾಯ.—ರಿಪೋರ್ಟ್ ಬಂದಮೇಲೆ ಫಸ್ಟ್ ರೀಡಿಂಗ್ ಆದಮೇಲೆ ಕ್ಲಾಜ್ ಬೈ ಕ್ಲಾಜ್ ತೆಗೆದುಕೊಳ್ಳದೆ ಹಿಂದೆ ಹೋಗಿ, ಬೇರೆ ಬಿಸಿನೆಸ್ ತೆಗೆದುಕೊಂಡು ಬಂದಿರುವುದು ಕ್ರಮವಲ್ಲ. ಈ ಮಸೂದೆಯನ್ನು ಹಿಂದಕ್ಕೆ ಹಾಕಬೇಕು ಎನ್ನುವ ಉದ್ದೇಶದಿಂದ ಹಾಗೆ ಮಾಡಿದ್ದೀರಿ ನಿಮ್ಮ ಪಕ್ಷದವರು ಯಾರೂ ಇದನ್ನು ತಡೆಯುತ್ತಿದ್ದಾರೆ ಎಂದು ಖಂಡಿತವಾಗಿ ಹೇಳಬೇಕು. ಇಲ್ಲದೇ ಹೋದರೆ ಎರಡು ಮಸೂದೆಯನ್ನು ಯಾತಕ್ಕೆ ತರಬೇಕಾಗಿತ್ತು ? ಭೂ ಸುಧಾರಣೆಯ ಮಸೂದೆಯನ್ನು ಮೊದಲು ಪಾಸು ಮಾಡಿ ನಂತರ ಅಗ್ರಿಕಲ್ಚರಲ್ ಯೂನಿವರ್ಸಿಟಿ ಮಸೂದೆಯನ್ನು ಮತ್ತು ಇನ್ನೊಂದು ಮಸೂದೆಯನ್ನೂ ತೆಗೆದುಕೊಳ್ಳಬಹುದಿತ್ತು. ಯಾತಕ್ಕೆ ಈ ಬಿಲ್ಲುಗಳನ್ನು ತಂದಿದ್ದೀರಿ ಎಂಬುದು ಅರ್ಥವಾಗುವುದಿಲ್ಲ ಭೂ ಸುಧಾರಣೆಯ ಕಲಮುಗಳನ್ನು ತಮ್ಮ ಪಕ್ಷದವರು ಕೊನೆ ನಿಮಿಷದಲ್ಲಿ ಚರ್ಚೆ ಮಾಡುತ್ತಿರುವುದು ನೋಡಿ ನನಗೆ ಆಶ್ಚರ್ಯವಾಗುತ್ತದೆ ಮತ್ತು ನಿಮ್ಮ ಪಕ್ಷದ ಬಗ್ಗೆ ಪರಿತಾಪವಾಗುತ್ತದೆ.

ಅಧ್ಯಕ್ಷರು —ಈ ಬಿಲ್ಲನ್ನು ಮೊದಲು ಸೆಲೆಕ್ಟ್ ಕಮಿಟಿಗೆ ಕಳುಹಿಸೋಣ.

Mysore State Agricultural Universities Bill 1973—Motion to Consider Debate Continued

SRI C. M. ARUMUGHAM (K. G. F.). —The Agricultural University Bill is being referred to a Joint Select Committee. In fact there is no urgency about it. We can take it up any time. I want to know whether the Government have sent their amendments to the Land Reforms Bill. If there is no amendment from the Government side, we are prepared to withdraw our amendments and pass the Bill right now.

SRI N. HUTCHMASTHY GOWDA.—The amendments are being cyclostyled and they will be distributed shortly.

SRI C. M. ARUMUGHAM.—The Hon. Speaker should have received the amendments. The Government have not yet decided about the Bill ! On account of the goodness of the Hon. Spaker the discussion on this Bill was postponed, and we took up the Agricultural University Bill. On many platforms the Ruling Party have stated that they would pass the Land Reforms (Amendment) Bill in December itself. Today is 28th May 1973, still the Bill has not been passed.

SRI D. DEV RAJ URS. We will go on with the land Reforms Bill after this Bill is referred to the select Committee.

I request the hon. Members to agree to refer the Agricultural University Bill to the Joint Select Committee and then we shall take up the discussion of the Land Reforms (Amendment) Bill. The Agricultural University Bill can be finished within 10 minutes. The amendments to the Land Reforms Bill are being cyclostyled and they will be distributed among the Members within a few minutes. I am one with the Opposition members in seeing that the Land Reforms Bill is passed.